ಅಮೆರಿಕದ ಸೈನ್ಯದವರು ಉಪಯೋಗಿಸಲು ನಿರ್ಧರಿಸಿದ್ದಾರಂತೆ' ಎಂದು ನಡುಗುವ ಧ್ವನಿಯಲ್ಲಿ ಇದ್ದ ಶಕ್ತಿಯನ್ನೆಲ್ಲ ಒಟ್ಟುಗೂಡಿಸಿ, ಭಯದಿಂದ ಮಗಳು ಕೂಗಿ ಹೇಳಿದಾಗ, ನಿಂತ ನೆಲವೇ ಬಾಯಿ ಬಿಟ್ಟು ಗಂಟಲ ಪಸೆಯೇ ಆರಿದಂತಹ ಅನುಭವ ತಾಯಿಯಾದ ಕಿಮ್‌ಗೆ. ಇನ್ನೂ ಎಷ್ಟು ಬಲಿಯಾಗಬೇಕು? ಈ ತಳಮಳ, ಭಯಕ್ಕೆ ಕೊನೆ ಎಂದು? ಈ ಕತ್ತಿಯ ಅಲುಗಿನ ಮೇಲಿನ ನಡಿಗೆಗೆ ಹದಿನೇಳು ಆಗಿರಬಹುದೇ ಅಥವಾ ಹದಿನೆಂಟೇ ಆಯ್ತೋ! ಉಳಿದೊಬ್ಬ ಅಣ್ಣನನ್ನು ಕಳೆದುಕೊಳ್ಳುವ ಭಯದಿಂದ ಮಗಳು ಬಿಕ್ಕಳಿಸಿ ಅಳತೊಡಗಿದಾಗ ಆ ಸದ್ದು ಕಿಮ್‌ನ ಆಲೋಚನೆಯ ದಿಕ್ಕನ್ನು ಬದಲಿಸಿತು. ಹುಟ್ಟಿದಾಗಿನಿಂದ ಇದೇ ಭಯ, ಕಳವಳ ತುಂಬಿದ ವಾತಾವರಣದಲ್ಲೇ ಬೆಳೆದ ಮಗಳು, ಮನೆಯ ಉಳಿದ ಮಕ್ಕಳಿಗೆ ಹೋಲಿಸಿದರೆ ಮಾನಸಿಕವಾಗಿ, ದೈಹಿಕವಾಗಿ ಸ್ವಲ್ಪ ದುರ್ಬಲಳಾಗಿದ್ದಾಳೆ ಎನ್ನುವ ಭಾವನೆ ಕಿಮ್‌ನ ಹೃದಯವನ್ನು ಮತ್ತಷ್ಟು ಕುಗ್ಗಿಸಿತು.

'ಅಮ್ಮಾ, ಅಣ್ಣ ಸುರಕ್ಷಿತವಾಗಿ ಮನೆಗೆ ಮರಳುತ್ತಾನೆ ಅಲ್ಲವೇ?' ಆ ಪ್ರಶ್ನೆ ಅವಳ ಎದೆಗೆ ಕತ್ತಿಯಂತೆ ತಿವಿಯಿತು. ಮಗಳ ನೋವಿಗೆ ಮದ್ದಾಗಲಿ, ಉತ್ತರವಾಗಲಿ ತಾಯಿಯಾದ ಕಿಮ್ ಬಳಿಯೂ ಇರಲಿಲ್ಲ. ಮಗಳನ್ನು ತಬ್ಬಿ ಕುಳಿತು ಸಮಾಧಾನಿಸಲೂ ಆಗದಂತೆ ಕೈ ನಡುಗುತ್ತಿತ್ತು. ಏಳು ವರ್ಷದ ಕೆಳಗೆ ಇದೇ ಯುದ್ಧ, ಗಂಡ ಹಾಗೂ ಹಿರಿಯ ಮಗನನ್ನು ಬಲಿ ತೆಗೆದುಕೊಂಡ ಕ್ಷಣ ನೆನಪಾದ ಕೂಡಲೇ ಬೆನ್ನಹುರಿಯಲ್ಲಿ ಹಿಮದಂತೆ ನಡುಕ ಓಡಾಡಿ, ಕಣ್ಣಂಚಿನಲ್ಲಿ ನೀರು ಚಿಮ್ಮಿತು... ವಿಭಿನ್ನ ಯುದ್ಧತಂತ್ರದಿಂದ ವಿಯೆಟ್ನಾಂ ಎಂಬ ಈ ಪುಟ್ಟ ರಾಷ್ಟ್ರ ಸೋಲದೇ ಹೋರಾಡುತ್ತಿದೆ. ಇಲ್ಲವಾದಲ್ಲಿ ಅಮೆರಿಕದಂತಹ ದೈತ್ಯ ರಾಷ್ಟ್ರದ ಎದುರು ಗಂಟೆಗಳಲ್ಲೇ ನಿರ್ನಾಮವಾಗಬಹುದಿತ್ತು. ಸೈನ್ಯದಲ್ಲಿ ಯೋಧರ ಸಂಖ್ಯೆ ಕಡಿಮೆ ಇದ್ದುದರಿಂದ ದೇಶದಲ್ಲಿರುವ ಪ್ರತಿಯೊಬ್ಬರೂ ಯೋಧರೇ ಆದರು. ಅದೇನೋ 'ಗೆರಿಲ್ಲಾ' ಯುದ್ಧತಂತ್ರವಂತೆ. ಅಧ್ಯಕ್ಷರು ಈ ಕಾರ್ಯತಂತ್ರದ ಬಗ್ಗೆ ಘೋಷಿಸಿದಾಗ, ಹೆಸರನ್ನು ಕೇಳಿ ಯುದ್ಧ ಭೀತಿ, ಅದರ ಪರಿಣಾಮಗಳ ಅರಿವಿಲ್ಲದ ಕಿಮ್ ಹಾಗೂ ಅವಳ ಗೆಳತಿಯರೆಲ್ಲ ಸೇರಿ ನಕ್ಕು ಬಿಟ್ಟಿದ್ದರು. ಎರಡು ದಶಕಗಳೇ ಸನ್ನಿಹಿತವಾಗುತ್ತಿದೆ ಅಂತಹ ಒಂದು ನಿರ್ಭಯವಾಗಿ ಮನಸಾರೆ ನಕ್ಕ ನಗುವಿಗೆ.

* * *

ಕಾಡಿನಲ್ಲಿ ಮಂಜು ನಿಧಾನವಾಗಿ ಮರಗಳ ಮೇಲೆ ಇಳಿಯುತ್ತಿತ್ತು. ತೇವದಿಂದ ಕೂಡಿದ ಮಣ್ಣು ಲಿನ್‌ನ ಕಾಲಿಗೆ ಅಂಟಿಕೊಂಡಿತ್ತು. ಉಸಿರೆಳೆದಷ್ಟೂ ಆ ತೇವ ಮಣ್ಣಿನ ವಾಸನೆ ಎದೆಗೆ ಕಹಿಯಾಗಿ ತುಂಬುತ್ತಿತ್ತು. ದೂರದಲ್ಲಿ ಕೀಟಗಳ ಏಕಸ್ವರ ಕಾಡನ್ನೆಲ್ಲ ನಿಧಾನವಾಗಿ ಆವರಿಸತೊಡಗಿತು. ಮೇಲಿಂದ ಲೋಹದ ರೆಕ್ಕೆಗಳು ಗಾಳಿಯನ್ನು ಚೂರು ಮಾಡುವ ಅಸ್ಪಷ್ಟ ಕಂಪನ ಕಾಡಿನ ಮೌನವನ್ನು ನಿಧಾನವಾಗಿ ಅಲುಗಾಡಿಸಿತು. ನಿಟ್ಟುಸಿರು ಬಿಡುತ್ತಾ ಲಿನ್ ಮರಕ್ಕೆ ಒರಗಿ ಕುಳಿತಿದ್ದನು. ಆ ಶಬ್ದ ಇನ್ನೂ ದೂರದಲ್ಲೇ ಇದ್ದರೂ, ಗಾಳಿಯ ಕಂಪನ ಅವನ ಎದೆಯೊಳಗೂ ಪ್ರತಿಧ್ವನಿಸುತ್ತಿತ್ತು.

ಅವನು ಅದನ್ನೆಲ್ಲ ಮರೆಯಲೋ ಎಂಬಂತೆ ಕಣ್ಣು ಮುಚ್ಚಿದನು. ಕ್ಷಣದಲ್ಲೇ ಕಾಡು ಕಣ್ಮರೆಯಾಯಿತು. ಅಡುಗೆ ಮನೆಯಲ್ಲಿ ತಾಯಿ ನಗುತ್ತಾ ನಿಂತಿದ್ದರು. 'ಬೇಗ ಬಾ, ಊಟ ತಣ್ಣಗಾಗುತ್ತದೆ!' ಎಂಬ ಅವಳ ಧ್ವನಿ ಮೃದುವಾಗಿ ಕಿವಿಯಲ್ಲಿ ಹರಿಯಿತು. ಲಿನ್‌ನ ತುಟಿಗಳ ಮೇಲೆ ಸಣ್ಣ ತುಂಟ ನಗುವೊಂದು ಮೂಡಿತು. ತಕ್ಷಣ ಎತ್ತರ ಬೆಳೆದ ಬಿದಿರು ಎಲೆಗಳ ನಡುವಿನಿಂದ, ಆಕಾಶದ ಮೇಲೆ ಕಬ್ಬಿಣದ ಹಕ್ಕಿಯ ನೆರಳು ಬಿದ್ದಂತಾಗಿ ಅವನ ಎದೆಯೊಳಗೆ ಏಕಾಏಕಿ ಭಯದ ಮಿಂಚೊಂದು ಸುಳಿಯಿತು. 'ಒಂದೊಮ್ಮೆ ನಾನು ಮರಳಿ ಮನೆಗೆ ಹೋಗದೇ ಹೋದರೆ?' ಎಂಬ ಪ್ರಶ್ನೆ ಮೊದಲ ಬಾರಿಗೆ ಅವನ ಮನಸ್ಸಿನಲ್ಲಿ ಸ್ಪಷ್ಟವಾದ ರೂಪ ಪಡೆದಿತ್ತು.

ಅವನು ಕೈಯಲ್ಲಿ ಹಿಡಿದಿದ್ದ ಮಣ್ಣನ್ನು ಬಿಗಿಯಾಗಿ ಒತ್ತಿ ಹಿಡಿದು 'ಅಮ್ಮಾ, ನಾನು ಬದುಕಿ ಬರಬೇಕು, ಬಂದೇ ಬರುತ್ತೇನೆ' ಎನ್ನುವ ಆತನ ಒಳಮನಸ್ಸಿನ ಪ್ರಾರ್ಥನೆ ಮುಗಿಯುವಷ್ಟರಲ್ಲಿ, ಆಕಾಶವನ್ನು ಚೀರುವಂತೆ ಹೆಲಿಕಾಪ್ಟರ್‌ನ ಶಬ್ದ ತೀವ್ರವಾಯಿತು. ಕೆಲವೇ ಕ್ಷಣಗಳಲ್ಲಿ ದೂರದ ಭಾಗದಲ್ಲಿ ಸ್ಫೋಟದ ಜ್ವಾಲೆ ಎದ್ದಿತು. ಭೂಮಿ ಕಂಪಿಸಿದಂತೆ ಅನಿಸಿತು. ಮಣ್ಣು, ಒಣಎಲೆಗಳು, ಹೊಗೆ ಎಲ್ಲವೂ ಗಾಳಿಯಲ್ಲಿ ಬೆರೆತು ಹರಡಿದವು. 'ಒಂದು ಕ್ಷಣ' ಎಂದು ಹೇಳಿ